ಶ್ರೀ ಕೆ.ಹೆಚ್. ಕುರುಡಗಿ : ಈ ವಿಚಾರವನ್ನು 1972ರಿಂದಲೂ ನಾನು ಕೇಳುತ್ತಾ ಇದ್ದೇನೆ. ಅದಕ್ಕೆ ಉತ್ತರವು ಯಾವಾಗಲೂ ನೆಗೆಟಿವ್ ಬರುತ್ತಾ ಇದೆ.

ಡಾ. ಆರ್.ಬಿ. ಚೌಧರಿ : ಇದರ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ಆ ಯಂತ್ರಗಳು ಹಳೆಯ ಯಂತ್ರಗಳು ಆಗಿರುವುದರಿಂದ ನೀರು ಎತ್ತುವ ಸಾಮರ್ಥ್ಯವು ಕಡಿಮೆಯಾಗಿದೆ. ಆದ್ದರಿಂದ ಹಾಗೆ ಆಗಿರಬಹುದು. ಹಾಗಾಗಿ ಅಚ್ಚುಕಟ್ಟು ಕಡಿಮೆಯಾಗಿರಬಹುದು.

ಮಲಪ್ರಭಾ ನದಿ ಮೇಲಿನ ಬಡಾಸ್ (ಕೆ.ಹೆಚ್.) ಸಮೀಪದಲ್ಲಿರುವ ಕಂಸಿನ ಕೊಪ್ಪದಲ್ಲಿ ಸಣ್ಣ ನೀರಾವರಿ ಯೋಜನೆ.

509 - ಶ್ರೀ ಕೆ.ಸಿ.ಮದಗೇಕರ್ ದೇಸಾಯಿ (ಹಿರೇಬಾಗೆವಾಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾಂವ ತಾಲ್ಲೂಕಿನ ಬಡಾಸ ಹತ್ತಿರ ಮಲಪ್ರಭಾ ನದಿಗೆ ಮೇಲೆ ಕಮಸಿನ ಕೊಪ್ಪ ಯಾತ ನೀರಾವರಿ ಯೋಜನೆಯ ಕೆಲಸದದ ಸರ್ವೆ ಮಾಡಿ ಅಂದಾಜು ಪತ್ರಿಕೆ ತಯಾರಿಸಲಾಗಿದೆಯೇ?

ಆ) ಈ ಯೋಜನೆಯನ್ನು ಪ್ರಾರಂಭಿಸದಿರಲು ಕಾರಣಗಳೇನು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಈ ಯೋಜನೆಯ ಪ್ರಾಥಮಿಕ ತನಿಖಾ ವರದಿ (ಪಿ.ಐ.ಆರ್) ಯನ್ನು ತಯಾರಿಸಲಾಗಿದೆ. ಅದರ ಪ್ರಕಾರ ಅಂದಾಜು ಮೊತ್ತ ರೂ. 30.00 ಲಕ್ಷವಿದ್ದು ಇದರ ಅಚ್ಚುಕಟ್ಟು ಸುಮಾರು 550 ಎಕರೆ (223 ಹೆಕ್ಟೇರ್) ಇರುವುದು.

ಆ) ಈ ಯೋಜನೆಯು ಈ ವರ್ಷದ ಆಯವ್ಯಯದಲ್ಲಿ ಸೇರಿಲ್ಲ.

Sri. K.C. Modgekar Desai : The Hon'ble Minister of State for Minor irrigation has personally visited Belgaum the month of March and he has directed the concerned departments to make a survey and send the report immediately. After that, during this week, they might have sent this report.

Because these villages are remote ones from Belgaum Taluk and it is a good thing Speaker Sir, since you are also coming from that area, you know the facts of this area. Once again I am urging the Hon'ble Minister through you Speaker sir, to make the provision and take this lift irrigation scheme at Kamsinakoppa near Badas (KH) in the Supplementary Budget only.

ಡಾ. ಆರ್. ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಇದು ಪ್ರಾಥಮಿಕ ತನಿಖೆ ಮಾತ್ರ ಮಾಡಲಾಗಿದೆ. ಸಾಧ್ಯವಿದ್ದರೆ ಇದನ್ನು ಅಡಿಶನಲಿ ಬಜೆಟ್‌ನಲ್ಲಿ ಮಾಡುತ್ತೇವೆ.

ಅಧ್ಯಕ್ಷರು : ಶ್ರೀ ವೈ.ಕೆ. ರಾಮಯ್ಯನವರೇ, ನಿಮ್ಮ ಮುಂದಿನ ಪ್ರಶ್ನೆಗೆ ಸಚಿವರು ಒಂದು ವಾರ ಟೈಂ ಕೇಳಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ : ಒಂದು ವಾರದವರೆಗೆ ಸದನ ಇರುವುದಿಲ್ಲ. ಎರಡನೆಯದಾಗಿ ಈ ಪ್ರಶ್ನೆಗೆ ವಿಷಯ ಸಂಗ್ರಹ ಮಾಡುವಂಥಾದ್ದು ಏನೂ ಇಲ್ಲ. ಸರ್ಕಾರದಲ್ಲಿರುವ ಅಂಕಿ ಅಂಶಗಳನ್ನು ಸದನಕ್ಕೆ ಕೊಟ್ಟರೆ ಸಾಕು. ಎಲ್ಲಿಂದಲೋ ವರದಿ ತರಿಸುವುದಕ್ಕೆ ವಿಷಯ ಸಂಗ್ರಹಣೆ ಮಾಡುವುದಕ್ಕೆ ಆಗದಿದ್ದರೆ ಅವರು ಕಾಲಾವಕಾಶ ಕೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಇದಕ್ಕೂ ಕಾಲಾವಕಾಶ ಸಚಿವರು ಏಕೆ ಕೇಳುತ್ತಿದ್ದಾರೆ ಎಂದು ತಮ್ಮ ಮೂಲಕ ಕೇಳಬಹುದೇ?

ಡಾ. ಆರ್. ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, ಇದು 1993-94ನೇ ಸಾಲಿನ ಆಯವ್ಯಯದಲ್ಲಿ ಒದಗಿರುವ ಅನುದಾನ ಏನಿದೆ ಅದರ ಬಗ್ಗೆ ಸರಿಯಾಗಿ ಅವರು ಮಾಹಿತಿ ಕೊಟ್ಟಿಲ್ಲ. ಆದ್ದರಿಂದ ನಾನು ಕಾಲಾವಕಾಶ ಕೇಳಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ನೀವು ಜಿಲ್ಲಾಪರಿಷತ್ತಿನಿಂದ ಎಷ್ಟು ಕೆರೆ ತೆಗೆದುಕೊಂಡಿದ್ದೀರಿ ಅದರ ಅಂಕಿಸಂಖ್ಯೆ ಸರ್ಕಾರದಲ್ಲಿದೆ. ಎಷ್ಟು ದುಡ್ಡನ್ನು ಕೊಟ್ಟಿದ್ದೀರಿ ಎಂದು ಕೇಳಿರುವುದು ಈ ದುಡ್ಡಿನ ಪ್ರಶ್ನೆ ಬಂದರೂ ಕಷ್ಟವಾಗುತ್ತಲ್ಲ ನಿಮಗೆ. ದುಡ್ಡಿನ ಬಗ್ಗೆ ಸರ್ಕಾರಕ್ಕೆ ಯಾವ ಪ್ರಶ್ನೆ ಬಂದರೂ ಕತ್ತುಹಿಸುಕೋಗುತ್ತಲ್ಲ ಏಕೆ?

ಡಾ. ಆರ್.ಬಿ. ಚೌಧರಿ : ನನಗೆ ಅದು ತೃಪ್ತಿ ತಂದಿಲ್ಲ ಅದಕ್ಕೋಸ್ಕರ ನಾನು....

Sri. Y.K. Ramaiah : It is a simple question. ಬಜೆಟ್‌ಗೂ ಇದಕ್ಕೂ ಸಂಬಂಧವಿಲ್ಲ. ನಾನು ಹೇಳಿದ ಎರಡು ಅಂಕಿಅಂಶ ನಿಮ್ಮ ಬಳಿ ಇರಬೇಕಲ್ಲ!

ಡಾ||ಆರ್.ಬಿ. ಚೌಧರಿ : ಮಾಹಿತಿ ಇದೆ, ಆದರೆ ಸರಿಯಾಗಿಲ್ಲ.

ಅಧ್ಯಕ್ಷರು : ರಾಮಯ್ಯನವರೇ ಅವರ ಬಳಿ ಇರುವ ಉತ್ತರ ತೃಪ್ತಿ ಇಲ್ಲ. ಅದಕ್ಕೋಸ್ಕರ ತಮಗೆ ಸರಿಯಾದ ಉತ್ತರ ಕೊಡಬೇಕೆಂದು....

ಶ್ರೀ ವೈ.ಕೆ. ರಾಮಯ್ಯ : ಬಜೆಟಿನ ಅಂಕಿಅಂಶಗಳು ಸರಿಯಾಗಿಲ್ಲ ಎಂದು ಅವರು ಹೇಳುತ್ತಿದ್ದಾರೆ. Can he correct it?

ಪ್ರೋ. ಎಂ.ಡಿ. ನಂಜುಂಡಸ್ವಾಮಿ : ಕೆರೆಗಳ ಬಗ್ಗೆ ನಾವು ಎಷ್ಟು ನಿರ್ಲಕ್ಷ್ಯ ಮಾಡುತ್ತಿದ್ದೇವೆ ಅಂದರೆ ಏನೋ ಕೆರೆಕಲ್ಯಾಣ ಎಂದು ಎಲ್ಲ ಹೇಳಿದ್ದಿರಿ. ಈ ಕೆರೆ ಕಲ್ಯಾಣ ಏನು ಎಂದು ನನಗೆ ಗೊತ್ತಾಗುತ್ತಿಲ್ಲ. ಕೆರೆಗಳನ್ನು ದುರಸ್ತಿ ಮಾಡುವುದು ಎಷ್ಟು ಮುಖ್ಯ ಅನ್ನುವುದು ಸರ್ಕಾರದ ಮನಸ್ಸಿಗೆ ಇನ್ನೂ ಹೋಗಿಲ್ಲ ಎಂದು ಕಾಣುತ್ತದೆ. ನೀವು ಮಾಡದೇ ಇದ್ದರೆ ಇದನ್ನೊಂದು ಇಥಿಯೋಪಿಯಾ ಆಗಿ ಕನ್‌ವರ್ಟ್ ಮಾಡುತ್ತೀರಿ. ಕೆರೆಕಲ್ಯಾಣ ಎಂದು ಏಕೆ ಹೇಳ್ತೀರಿ ಸುಮ್ಮನೆ, ಇಲ್ಲ ಈಚಲು ಮರದ ಮಾತಾಡಿ; ಮತ್ತೇನಾದರೂ ಮಾತಾಡಿ. ಕೆರೆಕಲ್ಯಾಣದ ಬಗ್ಗೆ ಮಾತ್ರ ಮಾತನಾಡಬೇಡಿ. ಇದಕ್ಕೆ ಅಂಕಿಅಂಶ ಕೊಡುವುದಕ್ಕೆ ಆಗಲಿಲ್ಲ ಎಂದರೆ ಇದು ನಿಮ್ಮ ಬೇಜವಾಬ್ದಾರಿ ತೋರಿಸುತ್ತದೆಯೇ ಹೊರತು ಮತ್ತೇನೂ ಅಲ್ಲ.

ಶರಾವತಿ ಟೇಲ್‌ರೇಸ್ ಯೋಜನೆ

478 - ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳಿನರಸೀಪುರ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶರಾವತಿ ಟೇಲರೇಸ್ ಯೋಜನೆಯನ್ನು ಕೇಂದ್ರದ ಪರಿಸರ ಇಲಾಖೆಯ ಪರವಾನಿಗೆಗಳಿಗೆ ಕಳುಹಿಸಲಾಗಿದೆಯೇ?

ಆ) ಹಾಗಿದ್ದರೆ ಯಾವಾಗ ಕಳುಹಿಸಲಾಯಿತು.

ಇ) ಈ ಯೋಜನೆಯ ಅಂದಾಜುವೆಚ್ಚ ಎಷ್ಟು ಹಾಗೂ ಇದರಿಂದ ಎಷ್ಟು ವಿದ್ಯುಚ್ಛಕ್ತಿ ಉತ್ಪಾದನೆಯಾಗುತ್ತದೆ?

ಈ) ಈ ಯೋಜನೆಗೆ ಕೇಂದ್ರದ ಪರಿಸರ ಇಲಾಖೆಯು ಪರವಾನಿಗೆ ನೀಡಿದೆಯೇ?

ಉ) ನೀಡದಿದ್ದಲ್ಲಿ ಆ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಹೌದು.